
## ನನ್ನ ಕಿಟಕಿ

ಉಡುಪಿ ಜಿಲ್ಲೆಯ ಮರವಂತೆಯ ಯೋಗೀಂದ್ರ ಮರವಂತೆ ಇಂಗ್ಲೆಂಡ್‌ನ ಬ್ರಿಸ್ಟಲ್ ನಗರದ 'ಏರ್ ಬಸ್' ಕಂಪನಿಯಲ್ಲಿ ವಿಮಾನಶಾಸ್ತ್ರ ತಂತ್ರಜ್ಞರು. ಪೂರ್ವ ಪಶ್ಚಿಮಗಳ ನಡುವಿನ ಈ ಯಾನ ಅವರ 'ನನ್ನ ಕಿಟಕಿ' ಸಂಕಲನದ ಪ್ರಬಂಧಗಳಲ್ಲಿ ಸೊಗಸಾಗಿ ಮೂಡಿಬಂದಿದೆ. ಜೀವನವನ್ನು ಮನುಷ್ಯಕೇಂದ್ರಿತವಾಗಿ ನೋಡುವುದಕ್ಕಿಂತಲೂ, ಸಮಗ್ರವಾಗಿ ಗ್ರಹಿಸುವುದರಲ್ಲಿ ಪ್ರಬಂಧಕಾರರಿಗೆ ಆಸಕ್ತಿಯಿದೆ. ಸಾಧಾರಣ ಎನ್ನಿಸುವ ಸಂಗತಿಗಳೂ ಅವರ ಒಳನೋಟದಲ್ಲಿ ವಿಶಿಷ್ಟ ರೂಪು ಪಡೆದುಕೊಂಡಿರುವುದಕ್ಕೆ, ಪ್ರಬಂಧಕಾರರ ಅನುಭವ ವಿಸ್ತಾರದ ಜೊತೆಗೆ ಜೀವನಪ್ರೀತಿಯೂ ಕಾರಣವಾಗಿದೆ. ಶಾಲೆಗೆ ಹೋಗುವ ಪುಟಾಣಿ ಮಗುವೊಂದರ ಧ್ವನಿಯಾಗಿ ಬರೆದಂತೆಯೇ, ಕಿಟಕಿಯಲ್ಲಿ ಬೇಸರ–ನಿರೀಕ್ಷೆಯೊಂದಿಗೆ ಕುಳಿತ ಬೆಕ್ಕಿನ ಕುರಿತೂ ಬರೆಯಬಲ್ಲರು. ಎಲ್ಲವನ್ನೂ ಒಳಗೊಳ್ಳುವ ಈ ನೋಟವು ಸಂಕಲನದ ಎಲ್ಲ ಪ್ರಬಂಧಗಳಲ್ಲಿಯೂ ಅಂತರ್ಗತವಾಗಿದ್ದು, ಬರಹದ ಸೌಂದರ್ಯವನ್ನು ಹೆಚ್ಚಿಸಿದೆ.

ಕೃತಿಯು ಎರಡು ಭಾಗಗಳಲ್ಲಿ ತೆರೆದುಕೊಳ್ಳುತ್ತದೆ. ಲೇಖಕರು ತಮ್ಮೂರಿನ ನೆಲೆಯಿಂದ ಗ್ರಹಿಸಿದ ವಿಚಾರಗಳನ್ನು ಮೊದಲ ಭಾಗದಲ್ಲಿ ಹಾಗೂ ವೃತ್ತಿಕ್ಷೇತ್ರದ ನೆಲೆಯಲ್ಲಿ ದೊರೆತ ಅನುಭವಗಳನ್ನು ಎರಡನೇ ಭಾಗದಲ್ಲಿ ಹೆಣೆದಿದ್ದಾರೆ. ಟ್ಯಾಗೋರರ ಸಾಹಿತ್ಯದ ಬೆಳಕಿನಲ್ಲಿ ಮಳೆಯ ಪ್ರಬಂಧ ಓದುಗರ ಮನಸ್ಸನ್ನು ಪುಳಕಗೊಳಿಸುವಂತಿದೆ. ಹುಟ್ಟೂರಿನ ಬೆಚ್ಚಗಿನ ಬಾಲ್ಯದ ನೆನಪುಗಳು ಹಾಗೂ ಅನುಭವದ ಹಿನ್ನೆಲೆಯಲ್ಲಿ ಬದುಕನ್ನು ಗ್ರಹಿಸಲು ಕಲಿತ ದಾರಿಗಳನ್ನು 'ಆಮೆ ಪುರಾಣ', 'ಶಿಕ್ಷಕರ ದಿನ ಅಕ್ಷರ ನಮನ', 'ಸ್ನೇಹಿತ ಸುಧೀರನ ನೆನಪು', 'ಸ್ಕೂಲ್ ಬ್ಯಾಗ್', 'ಯಕ್ಷಗಾನದ ಗುಂಗು' ಬರಹಗಳಲ್ಲಿ ಕಾಣಬಹುದು.




'ನನ್ನ ಕಿಟಕಿ' ಪ್ರಬಂಧವು ಲೇಖಕನೊಬ್ಬನ ನೋಟವು ಎಷ್ಟೊಂದು ವಿಶಾಲ ಗ್ರಹಿಕೆಯನ್ನು ಹೊಂದಬಹುದು ಎಂಬುದನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ನಾಯಿ–ಬೆಕ್ಕು, ಸಮುದ್ರ–ಮೀನು, ಮಳೆಮೋಡ, ವ್ಯಾಜ್ಯಗಳು, ಸಿನಿಮಾಗಳು, ಕಳ್ಳರು... ಅಷ್ಟೇ ಏಕೆ, 'ರಜೆ'ಯೆಂಬುದು ಉದ್ಯೋಗಸ್ಥರ ಅಂತರಂಗದಲ್ಲಿ ಎಬ್ಬಿಸುವ ನವಿರು ಅಲೆಗಳನ್ನೂ ಸೂಕ್ಷ್ಮವಾಗಿ ಗಮನಿಸಿದ್ದಾರೆ. ಹೀಗೆ ಆಯ್ದುಕೊಂಡ ವಸ್ತು–ವಿಚಾರಗಳನ್ನು ಪ್ರಬಂಧವಾಗಿ ಒಡಮೂಡಿಸುವ ಕಸುಬುದಾರಿಕೆಯನ್ನು ಯೋಗೀಂದ್ರರ ಯಶಸ್ವಿ ಪ್ರಬಂಧಗಳಲ್ಲಿ ಕಾಣಬಹುದು. ಮಾಹಿತಿಪೂರ್ಣ ಬರಹಗಳಾಗಿಯೂ 'ನನ್ನ ಕಿಟಕಿ' ರಚನೆಗಳು ಗಮನಸೆಳೆಯುತ್ತವೆ.

**ಲೇ: ಯೋಗೀಂದ್ರ ಮರವಂತೆ; ಪು: 192; ಬೆ: ₹ 203; ಪ್ರ: ಪ್ರಿಸಮ್ ಬುಕ್ಸ್ ಪ್ರೈ.ಲಿ.**
**ಫೋನ್: 080–26714108.**